ಈ ಘಟನೆಯನ್ನು ಹಲವು ಆಯಾಮಗಳಿಂದ ವಿಶ್ಲೇಷಿಸಬಹುದು. ನಾವು ಕಲಿತ ವಿದ್ಯೆ ಬೇರೆಯವರಿಗೆ ಉಪದೇಶಿಸುವುದಕ್ಕಾಗಿಯೇ ಹೊರತು ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಲು ಅಲ್ಲ – ಎಂಬ ಮನಃಸ್ಥಿತಿಯ ಬಗ್ಗೆ ಈ ಕತೆ ಹೇಳುತ್ತಿದೆ. 'ಪುರಾಣ ಹೇಳೋಕ್ಕೆ ಬದನೆ ತಿನ್ನೋಕ್ಕೆ' ಎಂಬ ಗಾದೆಯ ಧ್ವನಿ ಕೂಡ ಇದೇ. ನಾವು ಇತರರಿಗೆ 'ಹಾಗಿರಬೇಕು, ಹೀಗಿರಬೇಕು', 'ಅದನ್ನೇ ಮಾಡಬೇಕು, ಇದನ್ನು ಮಾಡಲೇ ಬಾರದು' – ಎಂದೆಲ್ಲ ಹೇಳುತ್ತಿರುತ್ತೇವೆ; ನಾವು ಮಾತ್ರ ಆ ಮಾತುಗಳಿಗೆ ತಕ್ಕ ವ್ಯಕ್ತಿತ್ವವನ್ನು ರೂಢಿಸಿಕೊಂಡಿರುವುದಿಲ್ಲ. ಇದನ್ನೇ 'ಪರೋಪದೇಶಪಾಂಡಿತ್ಯ' ಎನ್ನುವುದು. 'ಸುಳ್ಳನ್ನು ಹೇಳಬಾರದು' ಎಂದು ನಾವು ಬೇರೆಯವರಿಗೆ ಹೇಳುವ ಮಾತಿಗೆ ಸಾರ್ಥಕ್ಯ ಬರುವುದೂ, ಆ ಮಾತನ್ನು ನಮಗೆ ಹೇಳಲು ಅರ್ಹತೆ ಒದಗುವುದೂ ನಾವು ಕೂಡ ಸುಳ್ಳನ್ನು ಹೇಳದಿದ್ದಾಗಲೇ. ನಮ್ಮ ಕಾಲದಲ್ಲಿ ರಾಜಕಾರಣಿಗಳು ಪ್ರಾಮಾಣಿಕತೆ, ಭ್ರಷ್ಟಾಚಾರಮುಕ್ತ ಆಡಳಿತದ ಬಗ್ಗೆ ಉದ್ದುದ್ದದ ಭಾಷಣಗಳ ಮೇಲೆ ಭಾಷಣಗಳನ್ನು ಮಾಡುತ್ತಲೇ ಇರುತ್ತಾರೆ; ಅವರ ಮಾತುಗಳನ್ನು ಜನರು ಎಷ್ಟರ ಮಟ್ಟಿಗೆ ನಂಬುತ್ತಿದ್ದಾರೆ? ಜನರು ಆ ಮಾತುಗಳನ್ನು ಗಂಭೀರವಾಗಿ ತೆಗೆದುಕೊಳ್ಳದಿರಲು ಕಾರಣ ಏನೆಂದು ಅವರು ಯೋಚಿಸುತ್ತಿದ್ದಾರೆಯೆ? ಈ ಮಾತು ನಮ್ಮ ಮನೆಯ ವ್ಯವಹಾರಕ್ಕೂ ಸಲ್ಲುತ್ತದೆ. ತಂದೆ ತಾಯಿ ಶಿಸ್ತನ್ನು ಕುರಿತೋ ಸಚ್ಚಾರಿತ್ರ್ಯವನ್ನೋ ಕುರಿತೋ ಮಕ್ಕಳಿಗೆ ನೂರು ಉಪದೇಶದ ಮಾತುಗಳನ್ನು ಹೇಳಿದರೂ ಅವರು ಸ್ವೀಕರಿಸುವುದು ಕಷ್ಟ; ಆದರೆ ಅವರೇ ಆ ಮಾತುಗಳಿಗೆ ಆದರ್ಶವಾಗಿ ನಡೆದುಕೊಂಡರೆ ಮಕ್ಕಳಿಗೂ ಅವನ್ನು ತಾವೂ ಅಳವಡಿಸಿಕೊಳ್ಳಬೇಕೆಂಬ ಮನಃಸ್ಥಿತಿ ಸಹಜವಾಗಿಯೂ ಸುಲಭವಾಗಿಯೂ ಒದಗುವ ಸಾಧ್ಯತೆ ಹೆಚ್ಚು. 'ಹಿತೋಪದೇಶ'ದ ಪದ್ಯವೊಂದು ಸೊಗಸಾಗಿದೆ:

ಶಾಸ್ತ್ರಾಣ್ಯಧೀತ್ಯಾಪಿ ಭವಂತಿ ಮೂರ್ಖಾಃ
ಯಸ್ತು ಕ್ರಿಯಾವಾನ್ ಪುರುಷಃ ಸ ವಿದ್ವಾನ್ ।
ಸುಚಿಂತಿತಂ ಚೌಷಧಮಾತುರಾಣಾಂ
ನ ನಾಮಮಾತ್ರೇಣ ಕರೋತ್ಯರೋಗಮ್ ॥

'ಶಾಸ್ತ್ರಗಳನ್ನು ಅಧ್ಯಯನ ಮಾಡಿದಮೇಲೂ ಜನರು ಮೂರ್ಖರಾಗಿಯೇ ಇರುತ್ತಾರೆ. ಆದರೆ ಯಾವನು ಅದರಂತೆಯೇ ಆಚರಿಸುತ್ತಾನೆಯೋ ಅವನೇ ದಿಟವಾದ ವಿದ್ವಾಂಸ. ಬಹಳ ಸಂಶೋಧನೆಯನ್ನು ಮಾಡಿ, ಔಷಧವನ್ನು ನಿರ್ಧಾರ ಮಾಡಬಹುದು; ಆದರೆ ಆ ಔಷಧದ ಹೆಸರು ಹೇಳಿದ ಮಾತ್ರಕ್ಕೆ ರೋಗವೇನೂ ಪರಿಹಾರವಾಗುವುದಿಲ್ಲವಷ್ಟೆ!' – ಇದು ಈ ಪದ್ಯದ ತಾತ್ಪರ್ಯ.

ಜಿಯೂನ್ ಒಬ್ಬ ಬೌದ್ಧಭಿಕ್ಷು; ಅವನ ಉದ್ದೇಶ ಬುದ್ಧತ್ವವನ್ನು ಸಂಪಾದಿಸುವುದು. ಬುದ್ಧತ್ವ ಎನ್ನುವುದು ಬೇರೊಬ್ಬರಿಗೆ ಉಪದೇಶ ಮಾಡಿ ದಕ್ಕಿಸಿಕೊಳ್ಳುವಂಥದ್ದಲ್ಲ; ಅದು ಅನುಭವದಲ್ಲಿ ಕಾಣಿಸಿಕೊಳ್ಳಬೇಕಾದ ಅರಿವು. ಆದರೆ ಅವನು ಬೇರೊಬ್ಬರಿಗೆ ಪ್ರವಚನ ನೀಡುವುದರಲ್ಲಿಯೇ ಸುಖ ಕಾಣುತ್ತಿದ್ದ. ತನ್ನ ದಿಟವಾದ ಗುರಿಯನ್ನೇ ಮರೆತಿದ್ದ. ಬಹುಶಃ, ಅವನ ಸ್ನೇಹಿತರು 'ನೀನು ವಿದ್ವಾಂಸ, ಚೆನ್ನಾಗಿ ಮಾತನಾಡುತ್ತೀಯೆ' ಎಂದೆಲ್ಲ ಹೊಗಳಿ ಚಪ್ಪಾಳೆಯನ್ನೂ ಹೊಡೆದಿದ್ದರು ಎನಿಸುತ್ತದೆ. ಅವನಿಗೂ ಅದು ಹೆಮ್ಮೆ ತಂದಿದ್ದಿರಬಹುದು. ಆದರೆ ವಿದ್ಯೆ ಎನ್ನುವುದಕ್ಕೆ ಕೊನೆಯೇ ಇಲ್ಲ; ಇವತ್ತಿಗೆ ಸಾವಿರ ಪುಸ್ತಕಗಳನ್ನು ಓದಿರಬಹುದು; ಹತ್ತು ವಿದ್ಯೆಯನ್ನು ಕಲಿತಿದ್ದಿರಬಹುದು. ವಿದ್ಯೆಯ ಗಡಿ ಇಷ್ಟಕ್ಕೇ ಮುಗಿಯುವುದೆ? ಒಮ್ಮೆ ಗ್ರಂಥಾಲಯದ ಒಳಗೆ ಹೋಗಿ ಬಂದರೂ ಸಾಕು, ನಾವು ಕಲಿತಿರುವುದು ಎಷ್ಟು ಸ್ವಲ್ಪ ಪ್ರಮಾಣದ್ದು ಎಂದು ಗೊತ್ತಾಗುತ್ತದೆ. ಲೌಕಿಕ ವಿದ್ಯೆಯ ಕಲಿಕೆಯ ಬಗ್ಗೆಯೇ ಇಂಥದೊಂದು ಮಿತಿ ನಮ್ಮಲ್ಲಿದ್ದರೆ ಇನ್ನು ಅಲೌಕಿಕ ವಿದ್ಯೆಯ ಬಗ್ಗೆ ಏನು ಹೇಳುವುದು? ಜಿಯೂನ್ ಕಲಿಯಲು ಹೊರಟ್ಟಿದ್ದುದು ಅಲೌಕಿಕ ವಿದ್ಯೆಯನ್ನು. ಅದು ತೀರ ವೈಯಕ್ತಿಕ